# ಕರ್ತನ ಭೋಜನದಲ್ಲಿ ಅಯೋಗ್ಯವಾಗಿ ಪಾಲುಗಾರರಾಗುವ ವಿಚಾರ

*"ಹೀಗಿರುವದರಿಂದ ಯಾವನಾದರೂ ಅಯೋಗ್ಯವಾಗಿ ಕರ್ತನ ರೊಟ್ಟಿಯನ್ನು ತಿಂದರೆ ಇಲ್ಲವೆ ಆತನ ಪಾತ್ರೆಯಲ್ಲಿ ಪಾನಮಾಡಿದರೆ ಅವನು ಕರ್ತನ ದೇಹಕ್ಕೂ ರಕ್ತಕ್ಕೂ ದ್ರೋಹಮಾಡಿದವನಾಗಿರುವನು. ಪ್ರತಿಮನುಷ್ಯನು ತನ್ನನ್ನು ಪರೀಕ್ಷಿಸಿ ಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ. ಯಾಕಂದರೆ ಕರ್ತನ ದೇಹವೆಂದು ವಿವೇಚಿಸದೆ ತಿಂದು ಕುಡಿಯುವವನು ಹಾಗೆ ತಿಂದು ಕುಡಿಯುವದರಿಂದ ನ್ಯಾಯತೀರ್ಪಿಗೊಳಗಾಗುವನು. ಈ ಕಾರಣದಿಂದಲೇ ನಿಮ್ಮಲ್ಲಿ ಬಹುಮಂದಿ ಬಲಹೀನರೂ ರೋಗಿಗಳೂ ಆಗಿದ್ದಾರೆ, ಮತ್ತು ಅನೇಕರು ಸಾಯುತ್ತಾರೆ" (1 ಕೊರಿಂಥ 11:27-30).*

ಕ್ರಿಸ್ತನು ಸ್ಥಾಪಿಸಿದ ಭೋಜನಕ್ಕಾಗಿ ಕ್ರೈಸ್ತರಾದ ನಾವುಗಳು ಸೇರಿಬರುವಾಗ, ಯೇಸುವಿನ ಮರಣವನ್ನೆ ನೆನಪಿಸುತ್ತೇವೆ. ಪೌಲನು ಈ ಕುರಿತು, "ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನ ಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿಪಡಿಸುತ್ತೀರಿ" ಎಂದು ಬರೆದನು (1 ಕೊರಿಂಥ 11:26). ನಾವು ಈ ಆಚರಣೆಯನ್ನು ಮಾಡುವಾಗ, ಸಭೆಯ ಐಕ್ಯತೆಯನ್ನು ಪ್ರಸಿದ್ಧಿಪಡಿಸುತ್ತೇವೆ, ನಾವು ಸೇರಿ ಬರುವಾಗ ಆತನ ರಕ್ಷಣೆಯನ್ನು ಹೊಂದಿದವರು ಎಂದು ಸಹ ಪ್ರಸಿದ್ಧಿಪಡಿಸುತ್ತೇವೆ; ಹಾಗು ನಮ್ಮ ಧ್ಯಾನದ ಮುಖಾಂತರ, ಯೇಸುವಿನ ಯಜ್ಞದ ಮರಣವನ್ನು ಸಾರಿ ಹೇಳುತ್ತೇವೆ.

ಆದಿ ಕ್ರೈಸ್ತರು, ವಾರದ ಮೊದಲನೆಯ ದಿನದಲ್ಲಿ ಕರ್ತನ ಭೋಜನದ ಆಚರಣೆಯನ್ನು ಮಾಡುತ್ತಿದ್ದರು (ಇಬ್ರಿಯ 10:25; 1 ಕೊರಿಂಥ 16:1, 2). ತಮ್ಮ ದೇವರ ಆರಾಧನೆಯ ಸಮಯದಲ್ಲಿ ಅವರು ಕ್ರಮವಾಗಿ ತಿಂದು ಕುಡಿಯುತ್ತಿದ್ದರು. ವಾರದ ಮೊದಲನೆಯ ದಿನ ಅವರುಗಳು ಕೂಡಿಬರುವಾಗ ಈ ಆಚರಣೆಯನ್ನು ಮಾಡಬೇಕೆಂಬ ತತ್ವವನ್ನೇ ಪೌಲನು 1 ಕೊರಿಂಥ 11ರಲ್ಲಿ ಸೂಚಿಸಿರುವನು (ಅಪೊಸ್ತಲರ ಕೃತ್ಯಗಳು 20:7; 1 ಕೊರಿಂಥ 11:20).

ಕೊರಿಂಥದವರು ಕರ್ತನ ಭೋಜನವನ್ನು ಕ್ರಮ ಬದ್ಧವಾಗಿ ಆಚರಿಸುತ್ತಿರಲಿಲ್ಲ. ಈ ಕಾರ್ಯದ ನಿಮಿತ್ತ ಅಪೊಸ್ತಲನು ಅವರನ್ನು ಗದರಿಸಿದನು: ನೀವು ಮಾಡುವ ಭೋಜನವು ಭೋಜನವಲ್ಲ ... ಹೀಗೆ ಒಬ್ಬನು ಹಸಿದಿರುತ್ತಾನೆ, ಮತ್ತೊಬ್ಬನುಕುಡಿದು ಮತ್ತನಾಗಿರುತ್ತಾನೆ (1 ಕೊರಿಂಥ 11:20, 21). ಪೌಲನ ಗದರಿಕೆಯಲ್ಲಿ ಕರ್ತನ ಭೋಜನದ ಮೇಲಿದ್ದ ಅವನ ಗೌರವವನ್ನು ಗಮನಿಸುತ್ತೇವೆ, ಏಕೆಂದರೆ ಅದು ಕ್ರೈಸ್ತ ಜೀವನದ ಮೂಲ ಅಂಶವಾಗಿರುತ್ತದೆ. 1 ಕೊರಿಂಥ 11:27ರಲ್ಲಿ, ಈ ವಿಚಾರವಾಗಿ ಕಠೋರವಾದ ಮಾತನ್ನು ಹೇಳಲಾಗಿದೆ: "ಹೀಗಿರುವದರಿಂದ ಯಾವನಾದರೂ ಅಯೋಗ್ಯವಾಗಿ ಕರ್ತನ ರೊಟ್ಟಿಯನ್ನು ತಿಂದರೆ ಇಲ್ಲವೇ ಆತನ ಪಾತ್ರೆಯಲ್ಲಿ ಪಾನ ಮಾಡಿದರೆ ಅವನು ಕರ್ತನ ದೇಹಕ್ಕೂ, ರಕ್ತಕ್ಕೂ ದ್ರೋಹ ಮಾಡಿದವನಾಗಿರುವನು."

"ಅಯೋಗ್ಯವಾಗಿ" ಎಂಬ ಪದವನ್ನು ಪರಿಶೀಲನೆ ಮಾಡೋಣ. ಗ್ರೀಕ್ ಭಾಷೆಯಲ್ಲಿ "ವ್ಯರ್ಥ" ಎಂಬುದಾಗಿದೆ. ಅದರ ಕ್ರಮಬದ್ಧತೆಯನ್ನು ತೋರುತ್ತದೆ. NASB ಯಲ್ಲಿ ಎರಡು ಇಂಗ್ಲೀಷ್ ಪದಗಳು: "ಅಯೋಗ್ಯವಾದ ಆಚರಣೆ" ಹೌದು ನಾವುಗಳು ಇದರಲ್ಲಿ ಅಯೋಗ್ಯ ವಾಗಿಯೂ ಪಾಲುಗಾರರಾಗಿದ್ದೇವೆಯೋ?

## ದುರುದ್ದೇಶದಿಂದ

ದುರುದ್ದೇಶದಿಂದ ಕರ್ತನ ಭೋಜನದಲ್ಲಿ ಪಾಲುಗಾರರಾದರೆ ಅದು ಅಯೋಗ್ಯವಾದ ಕಾರ್ಯವಾಗಿದೆ. ಕರ್ತನ ಭೋಜನವು ಒಂದು ಪ್ರಮುಖವಾದ ರೂಪರೇಷೆಯನ್ನು ಹೊಂದಿರುತ್ತದೆ, ಅದ ಕರ್ತನನ್ನು ನೆನಸುವದೇ ಆಗಿದೆ. ಆದ್ದರಿಂದ ಪೌಲನು "ನೀವು ಈ ರೊಟ್ಟಿಯನ್ನು ತಿಂದು, ಈ ಪಾತ್ರೆಯಲ್ಲಿ ಪಾನ ಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿಪಡಿಸುತ್ತೀರಿ" (1 ಕೊರಿಂಥ 11:26). ಹೌದು ಕರ್ತನ ದೇಹ ಮತ್ತು ರಕ್ತ ನಮಗಾಗಿ ನೀಡಲಾಯಿತು ಎಂದು ಗ್ರಹಿಸುವಾಗ ಮಾತ್ರ ಆತನನ್ನು ಪ್ರಸಿದ್ಧಿಪಡಿಸುತ್ತೇವೆ.

## ಒಂದು ತಪ್ಪಾದ ಆಧ್ಯತೆ

*ನಾವು ತಪ್ಪಾದ ಆಧ್ಯತೆಯನ್ನು ಹೊಂದಿ ಇದರಲ್ಲಿ ಪಾಲುಗಾರರಾದರೆ, ಅದು ಅಯೋಗ್ಯವಾಗಿದೆ.* ಕೊರಿಂಥದವರು ಧೈಹೀಕವಾದ ಪ್ರೀತಿಯ ಔತಣಕ್ಕೆ ಕರ್ತನ ಭೋಜನಕ್ಕಿಂತ ಮಿಗಿಲಾದ ಸ್ಥಾನವನ್ನು ನೀಡಿದ್ದರು. ಅವರ ಹೃದಯಗಳು ಬೇರೆ ವಿಚಾರಗಳನ್ನು ಒಳಗೊಂಡಿದ್ದವು. ಆದ್ದರಿಂದ ಪೌಲನು: ಭೋಜನವಾಗುವಲ್ಲಿ ಪ್ರತಿಯೊಬ್ಬನು ತಾನು ತಂದದ್ದನ್ನು ಮತ್ತೊಬ್ಬನಿಗಿಂತ ಮುಂದಾಗಿ ಊಟಮಾಡುತ್ತಾನೆ; ಹೀಗೆ ಒಬ್ಬನು ಹಸಿದಿರುತ್ತಾನೆ, ಮತ್ತೊಬ್ಬನು ಕುಡಿದು ಮತ್ತನಾಗಿರುತ್ತಾನೆ (1 ಕೊರಿಂಥ 11:21) ಎಂದು ಹೇಳಿರುವನು. ಈ ಕ್ರೈಸ್ತರು ಹೊಟ್ಟೆಬಾಕತನವನ್ನು ವೈಯಕ್ತಿಕವಾದ ಇಚ್ಛೆಗಳನ್ನು ಹಾಗೂ ಸ್ವಾರ್ಥವನ್ನು ಹೊಂದಿದ್ದರು. ಅವರು ಅದನ್ನು ಕರ್ತನ ಕ್ರಮದಲ್ಲಿ ಅನುಸರಿಸದೆ, ತಮ್ಮ ಇಷ್ಟಪ್ರಕಾರ ಆಚರಿಸುತ್ತಿದ್ದರು, ಅವರು ಗೌರವದಿಂದಾಗಲೀ, ಆಲೋಚನೆಯಿಂದಾಗಲೀ, ಆತನು ತಿಳಿಸಿದ ಉದ್ದೇಶದಂತೆ ಅದನ್ನು ಅನುಸರಿಸಲಿಲ್ಲ.

## ಒಂದು ತಪ್ಪಾದ ಮನೋಭಾವದಿಂದ

*ನಮ್ಮ ಹೃದಯಗಳಲ್ಲಿ ದಂಗೆಯ ಮನೋಭಾವನೆ ಇದ್ದು, ಕರ್ತನ ಭೋಜನದಲ್ಲಿ ಪಾಲುಗಾರರಾದರೆ, ಅದು ಅಯೋಗ್ಯ ಕಾರ್ಯವಾಗಿರುತ್ತದೆ.* ಕರ್ತನ ಭೋಜನದ ಮೂಲಕ ಆತನು ನಮಗೆ ಮಾಡಿರುವ ಕಾರ್ಯವನ್ನು ಮೆಚ್ಚಿಕೊಳ್ಳುತ್ತೇವೆ, ಅದೇ ಸಮಯದಲ್ಲ ಯೇಸುವಿನ ಮಾರ್ಗದರ್ಶಕ್ಕೆ ತಲೆ ಬಾಗುತ್ತೇವೆ. ಕರ್ತನ ಭೋಜನವನ್ನು ಆತನೇ ಸ್ಥಾಪಿಸಿದ್ದಾನೆ. ಅದರ ಮೂಲಕ ಆತನು ನಮ್ಮೊಂದಿಗೆ ಸಂಪರ್ಕಿಸುತ್ತಾನೆ. ನಾವು ಅವುಗಳನ್ನು ತಿಂದು ಕುಡಿಯುವಾಗ ಆತನ ಮರಣಕ್ಕೆ ಕೃತಜ್ಞರಾಗಿರುತ್ತೇವೆ. ಒಬ್ಬ ವಿಧೇಯನಾದ ಕ್ರೈಸ್ತನು ಕರ್ತನ ಭೋಜನವನ್ನು ಎಂದಿಗೂ ನಿರಾಕರಿಸುವದಿಲ್ಲ.

## ಮುಕ್ತಾಯ

ಈ ವಾಕ್ಯದ ಹಿನ್ನೆಲೆಯಲ್ಲಿ "ಅಯೋಗ್ಯವಾಗಿ" ಪಾಲು ತೆಗೆದುಕೊಳ್ಳಬಾರದು, ಅಂದರೆ ಸಮರ್ಪಣೆ ಇಲ್ಲದ ಹೃದಯವಿರಬಾರದು ಉದ್ದೇಶ ಅನರ್ಥವಾಗಬಾರದು, ರೂಢಿಯಾಗಬಾರದು ಎಂಬದೇ.

ಕರ್ತನ ಭೋಜನದ ಸಮಯದಲ್ಲಿ ಸ್ವ ಪರೀಕ್ಷೆ ಉಂಟಾಗುತ್ತದೆ. ಇದರ ಕುರಿತು ಪೌಲನು "ಪ್ರತಿ ಮನುಷ್ಯನು ತನ್ನನ್ನು ಪರೀಕ್ಷಿಸಿಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ" (1 ಕೊರಿಂಥ 11:28). ನಾವು ಇದರಲ್ಲಿ ಪಾಲುಗಾರರಾಗುವಾಗ, ನಮ್ಮ ಮನೋಭಾವವನ್ನು ಉದ್ದೇಶವನ್ನು ಕ್ರಿಯೆಯನ್ನು ಪರೀಕ್ಷಿಸಿಕೊಳ್ಳಬೇಕು. ಒಬ್ಬನು ಅದನ್ನು ಪರಿಶುದ್ಧವೆಂದು ತಿಳಿಯದೆ ತೆಗೆದುಕೊಳ್ಳದೆ ಹೋದರೆ ಅವನು ಕಠಿಣ ನ್ಯಾಯ ತೀರ್ಪಿಗೆ ಒಳಗಾಗುವನು - "ಯಾಕಂದರೆ ಕರ್ತನ ದೇಹವೆಂದು ವಿವೇಚಿಸದೆ ತಿಂದು

ಕುಡಿಯುವವನು ಹಾಗೆ ತಿಂದು ಕುಡಿಯುವದರಿಂದ ನ್ಯಾಯ ತೀರ್ಪಿಗೆ ಒಳಗಾಗುವನು" (1 ಕೊರಿಂಥ 11:29).

---

*"ಪರಂತು ನೀವೆಲ್ಲರು ಕೂಡಿಬರುವಾಗ ನೀವು ಮಾಡುವ ಭೋಜನವು ಕರ್ತನ ಭೋಜನವಲ್ಲ. ಭೋಜನವಾಗುವಲ್ಲಿ ಪ್ರತಿಯೊಬ್ಬನು ತಾನು ತಂದದ್ದನ್ನು ಮತ್ತೊಬ್ಬರಿಗಿಂತ ಮುಂದಾಗಿ ಊಟಮಾಡುತ್ತಾನೆ; ಹೀಗೆ ಒಬ್ಬನು ಹಸಿದಿರುತ್ತಾನೆ, ಮತ್ತೊಬ್ಬನು ಕುಡಿದು ಮತ್ತನಾಗಿರುತ್ತಾನೆ. ಏನು, ಉಣ್ಣುವದಕ್ಕೂ ಕುಡಿಯುವದಕ್ಕೂ ಮನೆಗಳಿಲ್ಲದೆ ಇದ್ದೀರಾ? ಅಥವಾ ದೇವರ ಸಭೆಯನ್ನು ಅಸಡ್ಡೆಮಾಡಿ ಏನೂ ಇಲ್ಲದವರನ್ನು ನಾಚಿಕೆಪಡಿಸುತ್ತಿರಾ? ನಾನು ನಿಮಗೇನು ಹೇಳಲಿ? ನಿಮ್ಮನ್ನು ಹೊಗಳಲೋ? ಈ ವಿಷಯದಲ್ಲಿ ಹೊಗಳುವದಿಲ್ಲ" (1 ಕೊರಿಂಥ 11:20-22).*